ತತ್ತರಿಸುತ್ತಿದ್ದ ಕರಿಅಜ್ಜ. ಸಾವರಿಸಿಕೊಂಡು ಬಿಳಿಅಜ್ಜನ ಕಾಲುಹಿಡಿದು ಎಳೆದು, ತಿರುಗಿಸಿ, ಬೆನ್ನ ಮೇಲೆ ಕೂತಾಗ ಬಿಳಿಅಜ್ಜ 'ಅಯ್ಯೋ ಸತ್ತೆ' ಎಂದು ಕಿರುಚಿದ. ಹೆಬ್ಬಾವು ಹಿಡಿದ ಹಾಗೆ ಕರಿಅಜ್ಜ ಬಿಳಿಅಜ್ಜನನ್ನು ಹಿಡಿದಿದ್ದ. 'ಬೇಡ ಕರಿಅಜ್ಜ ಬೇಡ ಕರಿಅಜ್ಜ' ಎಂದು ಚಂದ್ರು ಅಳುತ್ತಿದ್ದ. ಅಷ್ಟು ಹೊತ್ತಿಗೆ ಅಜ್ಜಿ ಒಳಗಿನಿಂದ ನುಗ್ಗಿದಳು. ಕರಿಅಜ್ಜನನ್ನು ನೂಕಿ ನೂಕಿ 'ನಿಮಗೆ ಸ್ವಲ್ಪಾನೂ ಬುದ್ಧಿ ಇಲ್ಲ' ಎಂದಳು. ಕರಿಅಜ್ಜ ಅಲ್ಲಿಂದ ಎದ್ದು ಎಣ್ಣೆಯಾದ ತನ್ನ ಹಾಸಿಗೆಯ ಮೇಲೆ ಉರುಳಿಕೊಂಡ.

ಮಾರನೆ ದಿನದಿಂದ ಬಿಳಿಅಜ್ಜ ದೇವಸ್ಥಾನಕ್ಕೆ ಹೋಗಲಿಲ್ಲ. ಜ್ವರ ಹಿಡಿದು ಮಲಗಿದ. ಆಗೀಗ 'ಹಾವು ಹಾವು' ಎಂದು ಕನವರಿಸುತ್ತಿದ್ದ. ಬಿಳಿಅಜ್ಜನ ತಮ್ಮನಿಗೆ ಈ ವಿಷಯ ತಿಳಿದಾಗ, ಎರಡು ಮೈಲಿ ದೂರದಿಂದ ಗಾಡಿಕಟ್ಟಿಸಿಕೊಂಡು ಬಂದು, ಬಿಳಿಅಜ್ಜನನ್ನು ಕರೆದುಕೊಂಡು ಹೋದ.

★★★

ಬಿಳಿಅಜ್ಜನ ತಮ್ಮನ ಮನೆಗೆ ಹೋಗಿ ನಾಲ್ಕು ದಿನವಾಗಿತ್ತು. ಆ ರಾತ್ರಿ ಕರಿಅಜ್ಜ ಮೈಗೆಲ್ಲ ಹರಳೆಣ್ಣೆ ಬಳಿದುಕೊಂಡು ಬಚ್ಚಲುಮನೆಯಲ್ಲಿ ನಿಂತಿದ್ದ. ಕರಿಅಜ್ಜನ ಬೆನ್ನಿಗೆ ಹರಳೆಣ್ಣೆ ಹಚ್ಚಿದ ಚಂದ್ರುವೂ ಅಲ್ಲೇ ಇದ್ದ. ದೊಡ್ಡ ಬಚ್ಚಲೊಲೆಯಲ್ಲಿ ಕೊರಡುಗಳು ಉರಿಯುತ್ತಿದ್ದವು. ಕರಿಅಜ್ಜನ ಮೈ ಎಣ್ಣೆಸ್ನಾನ ಮಾಡಿದ ಕಪ್ಪುಕಲ್ಲಿನ ವಿಗ್ರಹದಂತೆ ಹೊಳೆಯುತ್ತಿತ್ತು. ಬಚ್ಚಲೊಲೆಯ ವಿಚಿತ್ರ ಬೆಳಕಿನ ಜೊತೆಯಲ್ಲಿ ಚಿಮಣಿಬುಡ್ಡಿಯ ಬೆಳಕೂ ಸೇರಿತ್ತು. ಕರಿಅಜ್ಜ ಸ್ನಾನಕ್ಕಾಗಿ ಇಳಿದಾಗ ತಳವಾರ ಕೆಂಚ ಬಂದು ಬಿಳಿಅಜ್ಜ ಕೈಲಾಸವಾಸಿಯಾದದ್ದನ್ನು ಹೇಳಿದ. ಕರಿಅಜ್ಜ ಬೇಗ ಬೇಗ ಸ್ನಾನ ಮುಗಿಸಿದ. ಅಜ್ಜಿ ಹೋ ಎಂದು ಅತ್ತಳು. ಚಂದ್ರು ಅಜ್ಜಿಯ ಪಕ್ಕದಲ್ಲಿ ಕೂತು ಬಿಕ್ಕಿ ಬಿಕ್ಕ ಅತ್ತ.

ಬಿಳಿಅಜ್ಜ ಸತ್ತ ಸುದ್ದಿಯನ್ನು ಕೇಳಿ ಚಂದ್ರೂ ತಂದೆ ಅವನನ್ನು ಕರೆದುಕೊಂಡು ಹೋಗುವುದಕ್ಕೆ ಬಂದರು. ಬಿಳಿಅಜ್ಜನ ಜೊತೆಗೆ ಕರಿಅಜ್ಜನ ಜಗಳವಾದಾಗಿನಿಂದ ಚಂದ್ರೂಗೆ ಕರಿಅಜ್ಜನನ್ನು ಕಂಡರೆ ಮೊದಲಿಗಿದ್ದ ಹೆದರಿಕೆ ಇನ್ನಷ್ಟು ಹೆಚ್ಚಾಗಿತ್ತು. ಸೂತಕ ಕಳೆದ ಮೇಲೆ ತನ್ನ ತಂದೆಯ ಜೊತೆಗೆ ಊರಿಗೆ ಹೊರಡುವುದಕ್ಕೆ ಒಂದು ದಿನ ಮುಂಚೆ ಚಂದ್ರು ಅಡಿಗೆ ಮನೆಗೆ ಹೋಗಿ ಅಜ್ಜಿಯ ಹತ್ತಿರ ಕುಳಿತುಕೊಂಡ. 'ಅಜ್ಜಿ ಬಾ ಅಜ್ಜಿ ನಮ್ಮೂರಿಗೆ ಹೋಗೋಣ' ಎಂದ.

'ಈಗ್ಲೇ ಬರೋಲ್ಲ' ಎಂದಳು ಅಜ್ಜಿ.

'ಮತ್ಯಾವಾಗ ಬರ್ತಿ?'

'ನಿಂಗೊತ್ತಿಲ್ಲ ಸುಮ್ಕಿರು, ಆ ಸೂಳೇಮಗನ ಹತ್ರ ಒಂದಿಷ್ಟು ದುಡ್ಡು ಕಿತ್ಕೊಂಡು ಬರ್ತೀನಿ' ಎಂದಳು ಅಜ್ಜಿ.

ಆ ದಿನ ಸಂಜೆ ಚಂದ್ರು ತನ್ನ ತಂದೆಗೆ ಹಿತ್ತಲಿನಲ್ಲಿ ತಾನು ಬೆಳೆದ ಗಿಡಗಳನ್ನು ತೋರಿಸಲಿಕ್ಕೆ ಕರೆದುಕೊಂಡು ಹೋದ. ಹಿತ್ತಲಿನ ಬಲಗಡೆ ಮೂಲೆಯಲ್ಲಿದ್ದ ಹಲಸಿನಮರದ ಹತ್ತಿರ ಹೋದಾಗ, ಅಲ್ಲಿ ತುಂಡು ತುಂಡಾಗಿದ್ದ ಹೆಬ್ಬಾವು ಬಳ್ಳಿಯನ್ನು ನೋಡಿದಾಗ 'ಅಪ್ಪ, ಕರಿಅಜ್ಜನನ್ನೂ ಹೀಗೆ ಕಡ್ದು ಕಡ್ದು ಹಾಕ್ಬೇಕಿತ್ತು' ಎಂದ.